ಅ) ಹಳಿಯಾಳ–ಹೆಬಸೂರು–ಸವದತ್ತಿ, ಧಾರವಾಡ–ಸವದತ್ತಿ, ಧಾರವಾಡ ನಗರದ ರಸ್ತೆಗಳ ಡಾಂಬರೀಕರಣದ ನಂತರ ಪಕ್ಕದ ರಸ್ತೆ (ಮಟ್‌ಪಾತ್) ಮುರ್ರಂ ಹಾಕಿರುವ ಬಗ್ಗೆ ದಾಖಲೆ ಇರುವುದು ಹೇಗೆ: (ವಿವರ ನೀಡುವುದು)

ಆ) ಸದರಿ ಕೆಲಸದಲ್ಲಿ ದೋಷವಿದ್ದರೆ ಹೊಣೆಗಾರರು ಯಾರು: ಇವರ ಮೇಲೆ ಕೈಗೊಂಡ ಕ್ರಮವೇನು:

ಇ) ಸದರಿ ಕಾರ್ಯದ ನಿರ್ವಹಣೆ ಅವಧಿ ಎಷ್ಟು ವರ್ಷ ಇರುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹಳಿಯಾಳ–ಹೆಬಸೂರು–ಸವದತ್ತಿ, ಧಾರವಾಡ–ಸವದತ್ತಿ, ಧಾರವಾಡ ನಗರದ ರಸ್ತೆಗಳ ಡಾಂಬರೀಕರಣದ ನಂತರ ಪಕ್ಕದ ರಸ್ತೆ (ಮಟ್‌ಪಾತ್) ಮುರ್ರಂ ಹಾಕಲಾಗಿದೆ.

ರಸ್ತೆ	ಪ್ರಮಾಣ
ಸೂಪಾ–ಹಳಿಯಾಳ–ಧಾರವಾಡ–ಹೆಬಸೂರ	5383 ಘ.ಮೀ.
ಧಾರವಾಡ–ಸವದತ್ತಿ	1500 ಘ.ಮೀ.

ಆ) ಸದರಿ ಕೆಲಸದಲ್ಲಿ ಯಾವುದೇ ದೋಷವಿರುವುದಿಲ್ಲ.

ಇ) ಸದರಿ ಕಾರ್ಯದ ನಿರ್ವಹಣೆ ಅವಧಿ 3 ವರ್ಷಗಳು.

ಧಾರವಾಡ ನಗರದಲ್ಲಿ ಯಾತ್ರಿ ನಿವಾಸ ನಿರ್ಮಾಣ

2425 (3123) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ನಗರದಲ್ಲಿ ಯಾತ್ರಿ ನಿವಾಸ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದ ವರ್ಷ ಯಾವುದು: ಅದು ಪೂರ್ಣಗೊಳ್ಳಬೇಕಾದ ಅವಧಿ ಎಷ್ಟು:

ಆ) ಇದಕ್ಕಾಗಿ ಬಿಡುಗಡೆಯಾಗಿರುವ ಹಣ ಎಷ್ಟು: ವೆಚ್ಚ ಮಾಡಿರುವ ಹಣ ಎಷ್ಟು:

ಇ) ಈ ಯಾತ್ರಿ ನಿವಾಸ ಎಂದು ಪ್ರಾರಂಭಗೊಳ್ಳಲಿದೆ:

ಈ) ಯಾತ್ರಿ ನಿವಾಸವನ್ನು ಖಾಸಗಿಯವರಿಗೆ ನೀಡುವ ಉದ್ದೇಶ ಇದೆಯೆ: ಇದ್ದಲ್ಲಿ ಯಾವ ಷರತ್ತುಗಳೊಳಪಟ್ಟು ಎಷ್ಟು ಮೊತ್ತಕ್ಕೆ ನೀಡಲಾಗುವುದು:

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) 1996

ಪೂರ್ಣಗೊಳಿಸಲು ಅವಧಿ ನಿಗದಿಪಡಿಸಿರಲಿಲ್ಲ.

ಆ) ಬಿಡುಗಡೆ ಮಾಡಿರುವ ಹಣ ರೂ. 77.03 ಲಕ್ಷಗಳು ವೆಚ್ಚ ಮಾಡಿದ ಹಣ ರೂ. 98.14 ಲಕ್ಷಗಳು.

ಇ) ಖಾಸಗೀಕರಣಗೊಳಿಸಿದ್ದು ಪ್ರಾರಂಭಿಸಬೇಕಾದ ದಿನಾಂಕವನ್ನು ಆ ಸಂಸ್ಥೆಯೇ ತೀರ್ಮಾನಿಸುತ್ತದೆ.

ಈ) ಇದೆ, ಪುನಶ್ಚೇತನ ನಿರ್ವಹಣೆ ಹಾಗೂ ವರ್ಗಾವಣೆ ಆಧಾರದ ಮೇಲೆ 30 ವರ್ಷಗಳ ದೀರ್ಘಾವಧಿ ರಿಯಾಯಿತಿಯಲ್ಲಿ ನೀಡಿದ್ದು, ಇದರಿಂದ ರೂ. 163.50 ಲಕ್ಷ ಆದಾಯ ಬರುತ್ತದೆ.